<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ - ಶ್ರೀ. ಎ.ಎನ್. ವಕೀಲರಿಂದ ಪ್ರತಿವಾದಿಯರ ಪರವಾಗಿ</u>

3. ನಮ್ಮ ವಾಟ್ಸಪ್ ಗ್ರೂಪ್ ಹೆಸರು ನನಗೆ ನೆನಪಿಲ್ಲ. ಸದರಿ ಗ್ರೂಪ್ ನ ಅಡ್ಮಿನ್ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ವಾಟ್ಸಪ್ ಗ್ರೂಪ್ ನಲ್ಲಿ ಸುಮಾರು 150 ಜನ ಇದ್ದರು. ಅವರೇಲ್ಲಾ ನಾವೂರು ಗ್ರಾಮದವರು. ಅವರುಗಳ ಹೆಸರು ನನಗೆ ನೆನಪಿಲ್ಲ. ಅವರೇಲ್ಲಾ ನನ್ನ ಸ್ನೇಹಿತರು. 2022 ಕ್ಕೆ ಮೇಸೆಜ್ ಹಾಕಿದ್ದರು ಆದರೆ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ.

4. ವಾದಿಯವರಿಗೆ ಸದರಿ ಮೇಸೆಜ್ ಅನ್ನು ನಾನು ಕಳುಹಿಸಿರುವುದಿಲ್ಲ. ಅದೇ ರೀತಿ ಅವರಿಗೆ ಮೇಸೆಜ್ ಕಳುಹಿಸಿದವರು ಯಾರು ಎಂದು ನನಗೆ ಗೊತ್ತಿಲ್ಲ. ಅಡ್ಮಿನ್ ಬಳಿ ನಾನು ವಿಚಾರಿಸಿರುತ್ತೇನೆ ಆದರೆ ಅವರಿಗೂ ಸಹಃ ಸದರಿ ನಂಬರನ ವ್ಯಕ್ತಿಯ ಹೆಸರು ಪರಿಚಯ ಇರಲಿಲ್ಲ. ಸದರಿ ಗ್ರೂಪ್ ಈಗ ಚಾಲ್ತಿಯಲ್ಲಿ ಇರುವುದಿಲ್ಲ. ಅದನ್ನು 2023 ರಲ್ಲಿ ಕ್ಲೋಸ್ ಮಾಡಲಾಯಿತು. ಸದರಿ ಗ್ರೂಪ್ ಅನ್ನು ಅಡ್ಮಿನ ರವರೇ ಕ್ಲೋಸ್ ಮಾಡಿರುತ್ತಾರೆ. ಸದರಿ ಗ್ರೂಪ್ ನ ಹೆಸರು ಸಹಃ ನನಗೆ ನೆನಪಿಲ್ಲ. ವಾಟ್ಸಪ್ ಗ್ರೂಪ್ ಗೆ ಮೇಸೆಜ್ ಬಂದರೆ ಗ್ರೂಪ್ ನ ಹೆಸರು ಬರುತ್ತದೆ ಎಂದರೆ ಸರಿ. ನಿಪಿ 3 ರಲ್ಲಿ ವಾಟ್ಸಪ್ ಗ್ರೂಪ್ ನ ಹೆಸರು ಕಂಡು ಬರುವುದಿಲ್ಲ ಎಂದರೆ ಸರಿ. ಆದರೆ ವಾಟ್ಸಪ್ ಗ್ರೂಪ್ ನ ಹೆಸರು ಏಕೆ ಕಂಡುಬರುತ್ತಿಲ್ಲ ಎಂದು ನನಗೆ ಗೊತ್ತಿಲ್ಲ.

5. ನಮ್ಮ ವಾಟ್ಸಪ್ ಗ್ರೂಪ್ ನಲ್ಲಿ ವಾದಿಯವರು ಸಹಃ ಸದಸ್ಯರಾಗಿದ್ದರು. ಅವರು ಗ್ರೂಪ್ ಪ್ರಾರಂಭವಾದಾಗಿನಿಂದ ಸದಸ್ಯರಾಗಿದ್ದರು. ಸದರಿ ವಿಚಾರ ಅವರಿಗೆ ಗೊತ್ತಿತ್ತು. ಗ್ರೂಪ್ ನಲ್ಲಿ ಮೇಸೆಜ್ ಹಾಕಿದವರ ವಿರುದ್ಧ ಅಡ್ಮಿನ್ ರವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಮೇಸೆಜ್ ಬಂದ ತಕ್ಷಣ ನಾನು ಸಹಃ ಕಮೆಂಟ್ ಮಾಡಿರುತ್ತೇನೆ. ಆದರೆ ವಾದಿಯವರು ಕಮೆಂಟ್ ಮಾಡಿರುವುದಿಲ್ಲ. ನಾನು ವಾದಿಯವರ ಬಳಿ ಮೇಸೆಜ್ ಬಂದ ತಕ್ಷಣ ಪೋನ್ ಮಾಡಿ ಕೇಳಿರುತ್ತೇನೆ. ವಾದಿಯವರು ಕಳುಹಿಸಿರುವ ಸ್ಕ್ರೀನ್‌ಶಾಟ್‌ಗಳು ನನ್ನ ಬಳಿ ಇವೆ. ಅವುಗಳನ್ನು 2022 ರಲ್ಲಿ ಕಳುಹಿಸಿರುತ್ತಾರೆ. ಪ್ರಿಂಟ್ ತೆಗೆದುಕೊಡಿ ಎಂದು ಸ್ಕ್ರೀನ್

ಶಾಟ್ ನ್ನು ನನಗೆ ಕಳುಹಿಸಿರುತ್ತಾರೆ. ಅದನ್ನು ಪಿ.ಡಿ.ಎಫ್. ಮಾಡಿ ನನಗೆ ಕಳುಹಿಸಿದ್ದರು. ನಾನು ಪ್ರಿಂಟ್ ತೆಗೆದು ಅವರಿಗೆ ನೀಡಿರುತ್ತೇನೆ.

6. ನಾನು ಸೌಂಡ್ಸ್ ಸಿಸ್ಟಮ್ ಹೊಂದಿರುತ್ತೇನೆ. ನಿಪಿ 3 ನ್ನು ನಾನು ಪ್ರಿಂಟ್ ತೆಗೆಸಿಕೊಟ್ಟಿರುತ್ತೇನೆ. ನಾನು ರೆಡ್ ಮೀ ಮೊಬೈಲ್ ಹೊಂದಿರುತ್ತೇನೆ. ಅದರ ಐ.ಎಂ.ಐ. ಸಂಖ್ಯೆ ನನಗೆ ಗೊತ್ತಿಲ್ಲ. 2022 ರಲ್ಲಿ ನಾನು ನಿಪಿ 3 ನ್ನು ಪ್ರಿಂಟ್ ತೆಗೆಸಿರುತ್ತೇನೆ. ಸ್ಕ್ರಿನ್‌ಶಾಟ್ ನನ್ನ ಮೊಬೈಲ್ ಗೆ 2022 ರಲ್ಲಿ ಬಂದಿರುತ್ತದೆ. ಅದನ್ನು ನಾನು ನನ್ನ ಮೇಲ್ ಗೆ ಕಳುಹಿಸಿ, ನಂತರ ಅದನ್ನು ಪುನಃ ಮತ್ತೊಬ್ಬರ ಮೇಲ್ ಗೆ ಕಳುಹಿಸಿ ಪ್ರಿಂಟ್ ತೆಗೆಸಿರುತ್ತೇನೆ. ಅಂತಹಃ ವಾಟ್ಸಪ್ ಗ್ರೂಪ್ ಇರಲಿಲ್ಲ ಎಂದರೆ ಸರಿಯಲ್ಲ.

7. ವಾದಿಯವರು ನನಗೆ 25 ವರ್ಷಗಳಿಂದ ಪರಿಚಯ. ನಾನು ಹಾಗೂ ವಾದಿಯವರು ರಾಜಕೀಯವಾಗಿ ಒಂದೇ ಪಕ್ಷದವರು ಎಂದರೆ ಸರಿಯಲ್ಲ. ಈ ದಾವೆಯನ್ನು ಯಾವ ಕಾರಣಕ್ಕೆ ಹಾಕಿದ್ದೇನೆ ಎಂದು ವಾದಿಯವರು ನನಗೆ ತಿಳಿಸಿರುತ್ತಾರೆ. ನಾನು ಹಾಗೂ ವಾದಿಯವರು ಸ್ನೇಹಿತರಲ್ಲ. ವಾದಿಯವರು ಸ್ಕ್ರಿನ್ ಶಾಟ್ ಗಳನ್ನು ನಿಮಗೆ ಕಳುಹಿಸಲು ಕಾರಣವೇನು ಎಂದರೆ ಸಾಕ್ಷಿಯು ಅದನ್ನು ಪ್ರಿಂಟ್ ತೆಗೆಯುವ ಬಗ್ಗೆ ವಾದಿಯವರಿಗೆ ಮಾಹಿತಿ ಇರಲಿಲ್ಲ ಎಂದು ಹೇಳುತ್ತಾರೆ. ನಾನು ಪ್ರಿಂಟ್ ತೆಗೆಯುವುದರಲ್ಲಿ ಪರಿಣಿತಿ ಹೊಂದಿದ್ದೇನೆ ಎಂದು ವಾದಿಯವರಿಗೆ ಯಾರು ತಿಳಿಸಿದರು ಎಂದು ನನಗೆ ಗೊತ್ತಿಲ್ಲ. ಸದರಿ ಸ್ಕ್ರಿನ್‌ಶಾಟ್ ನನ್ನ ಮೇಲ್ ನಲ್ಲಿ ಸ್ಟೋರ್ ಆಗಿದೆ. ನಾನು ಮೇಸೆಜ್ ಗಳನ್ನು ಎಡಿಟ್ ಮಾಡುವುದರಲ್ಲಿ ಎಕ್ಸಪರ್ಟ ಎಂದರೆ ಸರಿಯಲ್ಲ.

8. ನನ್ನ ಬಳಿ ಮೊಬೈಲ್ ಮಾತ್ರ ಇದೆ. ನಾನು ಪ್ರಿಂಟ್ ತೆಗೆಯಲು ಕಳುಹಿಸಿದ ಇ-ಮೇಲ್ ವಿಳಾಸ ಶ್ರೀ ಕೃಷ್ಣ ಪ್ರಿಂಟರ್ಸ್. ಅಂತಹಃ ಮೇಲ್ ಐ.ಡಿ. ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ವಾದಿಯವರು ತುಂಬಾ ಆತ್ಮೀಯ ಸ್ನೇಹಿತರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ